ಒ.ಎಸ್.ನಂ. **82/19**

**ಪಿ. ಡಬ್ಲೂ-3**

**ದಿನಾಂಕಃ 09.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿ 8 ಪರ ವಕೀಲರಿಂದಃ-**

ವಾದಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಆಸ್ತಿಗೋಸ್ಕರ ಎಂದು ನುಡಿಯುತ್ತಾರೆ. ವಾದಿ ತಾತ ಬೋಗಪ್ಪನಿಗೆ 3 ಜನ ಗಂಡು ಮಕ್ಕಳು. ಸದರಿ ಬೋಗಪ್ಪನಿಗೆ ಎಷ್ಟು ಆಸ್ತಿ ಇತ್ತು ಎಂದು ಗೊತ್ತಿಲ್ಲ. ಅವರ 3 ಜನ ಮಕ್ಕಳು ಬೋಗಪ್ಪ ಬದುಕಿದ್ದಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಿಭಾಗ ಆದ ನಂತರ 1995-96 ರಲ್ಲಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಖಾತೆ ಆದ ನಂತರ ಅವರವರ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ಅವರಿಗೆ ಸೇರಿದ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 4 ರವರ ಭಾಗಕ್ಕೂ ಆಸ್ತಿ ಬಂದಿತ್ತು ಎಂದರೆ ಸರಿ. ಅವರ ಭಾಗಕ್ಕೆ ಬಂದ ಆಸ್ತಿಯಲ್ಲಿ 1 ಎಕರೆ 9 ಗುಂಟೆ ಜಮೀನನ್ನು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕ್ರಯಕ್ಕೆ ಪಡೆದಾಗಿನಿಂದಲೂ ಪ್ರತಿವಾದಿ 8 ರವರು ಸ್ವಾಧೀನ ಇರುತ್ತಾರೆ ಎಂದರೆ ಸರಿ. ಸದರಿ ವಿಚಾರ ವಾದಿಗೆ ಗೊತ್ತಿರುತ್ತದೆ ಎಂದರೆ ಸರಿ. ಮಾರಾಟ ಮಾಡಿದ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿ.

**ಪಾಟೀ ಸವಾಲು :- ಪ್ರತಿವಾದಿ 7 ಪರ ವಕೀಲರಿಂದಃ-**

6 ನೇ ಪ್ರತಿವಾದಿಯಿಂದ 7 ನೇ ಪ್ರತಿವಾದಿ ದಾವಾ ಐಟಂ ನಂ 1 ನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಹಾಗಾಗಿ ವಾದಿಗೂ ಸದರಿ ಸ್ವತ್ತಿಗೂ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ..ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**